Bruhat Bengaluru Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ 20, ಗಂಗಾನಗರ, ಬೆಂಗಳೂರು

ಸಂಖ್ಯೆ:ಸ.ಅ/ವಾ-20/ಪಿ.ಆರ್./16/2020-21

ದಿನಾಂಕ: 17/07/2021

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಿಷಯ: ಮಾನ್ಯ ಆಯುಕ್ತರು ಬಿಬಿ.ಎಂಪಿ ರವರ ಆದೇಶ ಸಂಖ್ಯೆ: ಜಿ12(5)ಪಿ.ಆರ್./35/2021 ದಿನಾಂಕ 05/12/2020 ರವರ ಆದೇಶದಂತೆ ದಿನಾಂಕ 17/07/2021 ರಂದು ಬೆಳಿಗ್ಗೆ 10.30 ಗಂಟೆಗೆ ವಾರ್ಡ್ ನಂ.20, ಗಂಗಾನಗರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

### ಸಭೆಗೆ ಹಾಜರಾಗಿದ್ದವರ ವಿವರಗಳು

| ಕ್ರ.ಸಂ. | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ. ಬಿ.ಎಸ್. ಪ್ರಹಲಾದ್ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2 | ಶ್ರೀ. ರಾಮ್‌ರಾವ್ | ಕಾರ್ಯದರ್ಶಿ, ಸಹಾಯಕ ಅಭಿಯಂತರರು ವಾರ್ಡ್ ನಂ.20 |
| 3 | ಶ್ರೀ. ಕೆ.ಎನ್. ಮಂಜುನಾಥ್ | ಎಇಇ (SWM) |
| 4 | ಶ್ರೀಮತಿ ಶಾಹಿದಾ | ಹಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀಮತಿ ಸುವರ್ಣ ದೇವಿ | ವರ್ಕ್ ಇನ್ಸ್‌ಪೆಕ್ಟರ್, ಬಿಡ್ಬ್ಲ್ಯೂಎಸ್.ಎಸ್.ಬಿ. |
| 6 | ಶ್ರೀ. ಗಣೇಶ್ ಕೆ.ಎನ್. | ಕಿರಿಯ ಆರೋಗ್ಯ ಪರಿವೀಕ್ಷಕರು |
| 7 | ಶ್ರೀ. ಉಮೇಶ್ | ಮಾರ್ಷಲ್, ವಾರ್ಡ್ ನಂ.20 |
| 8 | ಶ್ರೀಮತಿ ಶಾಲಿನಿ ದೇಶ್‌ಪಾಂಡೆ | ಅಸೋಸಿಯೇಷನ್ ಪ್ರೆಸಿಡೆಂಟ್, ಹೆಚ್.ಎಂ.ಟಿ. ಲೇಔಟ್ |
| 9 | ಡಾ॥ ಎಸ್.ಎಂ. ಜಯದೇವಪ್ಪ | ಸಾರ್ವಜನಿಕರು |
| 10 | ಶ್ರೀ. ಮುನಿಕೃಷ್ಣ | ಸಾರ್ವಜನಿಕರು |
| 11 | ಶ್ರೀ. ಶಿವಕುಮಾರ | ಸಾರ್ವಜನಿಕರು |
| 12 | ಶ್ರೀ. ವಿನೋದ್ ಕುಮಾರ್ | ಸಾರ್ವಜನಿಕರು |
| 13 | ಶ್ರೀ. ಎಂ. ಉಮೇಶ್ | ಸಾರ್ವಜನಿಕರು |
| 14 | ಶ್ರೀ. ಮುನಿಯಪ್ಪ | ಸಾರ್ವಜನಿಕರು |
| 15 | ಶ್ರೀ. ಬಸವರಾಜ್ | ಸಾರ್ವಜನಿಕರು |

ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯಾದ ಶ್ರೀ. ಬಿ.ಎಸ್. ಪ್ರಹಲಾದ್ ಮತ್ತು ಕಾರ್ಯದರ್ಶಿಗಳಾದ ಶ್ರೀ. ರಾಮ್‌ರಾವ್ ರವರು ಸಭೆಗೆ ಆಗಮಿಸಿದ ಎಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಪ್ರಸ್ತಾಪಿಸಲು ಕೋರಲಾಯಿತು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ ನಂ.20 ರವರು ಸ್ವಯಂ ಪರಿಚಯ ಮಾಡಿಕೊಂಡು ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ ನಿರ್ವಹಣೆ, ರಸ್ತೆ ಗುಂಡಿ ಮುಚ್ಚುವ ಬಗ್ಗೆ, ಬೀದಿ ದೀಪಗಳ ನಿರ್ವಹಣೆ ಬಗ್ಗೆ ಮತ್ತು ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲು ಸಾರ್ವಜನಕರಿಗೆ ತಿಳಿಯಪಡಿಸಿದರು.